ಕೂಡ ಕೆಲಸ ಮಾಡಿದ್ದಾರೆ. ಅಷ್ಟೆ ಅಲ್ಲ ಈಗ ಮಾನ್ಯ ಮೊಯ್ಲಿಯವರು ತಿಳಿಸಿದಂತೆ, ನೆರಳಭಾಗ್ಯ, ಆಶ್ರಯ ಅಥವಾ ಅಂಬೇಡ್ಕರ್ ಈ ಕಾರ್ಯಕ್ರಮದಡಿಯಲ್ಲಿ ಮನೆ ಕೊಡುವುದಿದ್ದರೆ ಬಹಳ ಸಂತೋಷ, ಆ ರೀತಿಯ ಸಹಾಯವನ್ನು ಒದಗಿಸುವಲ್ಲಿ ನನ್ನ ಸಹಮತ ಕೂಡ ಇದೆ ಎನ್ನುವ ವಿಚಾರವನ್ನು ತಿಳಿಸುವುದಕ್ಕೆ ನಾನು ಇಚ್ಛಿಪಡುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ ; ಮಾನ್ಯ ಸಭಾಧ್ಯಕ್ಷರೆ, ಸನ್ಮಾನ್ಯ ವೀರಪ್ಪ ಮೊಯ್ಲಿಯವರು ಸುಂಟರಗಾಳಿಯಿಂದಾದ ಪರಿಣಾಮದ ಬಗ್ಗೆ ಹೇಳಿದ್ದಾರೆ, ಅದು ವಸಂತ ಬಂಗೇರರವರ ಕ್ಷೇತ್ರದಲ್ಲಿ ನಡೆದಿರತಕ್ಕಂಥ ಒಂದು ದೊಡ್ಡ ಅನಾಹುತ, ಅದರ ಬಗ್ಗೆ ಪತ್ರಿಕೆಗಳಲ್ಲೂ ಕೂಡ ಸಾಕಷ್ಟು ಬಂದಿದೆ. ತಾವು ಕೆಲಸ ವಿಚಾರಗಳನ್ನು ಎತ್ತಿದ್ದಿರಿ, ಶ್ರೀಮಾನ್ ಬಂಗೇರರವರು ಶಾಸಕರಾಗಿ ತಮ್ಮ ಕ್ಷೇತ್ರದಲ್ಲಿ ಏನು ಮಾಡಿದ್ದಿರೆನ್ನುವ ವಿಚಾರವನ್ನು ಹೇಳಿದಿರಿ, ಅಧಿಕೃತವಾಗಿ ಜಿಲ್ಲಾಡಳಿತದಿಂದ ಸಂಪೂರ್ಣವಾಗಿರುವ ಒಂದು ವರದಿಯನ್ನು ತರಿಸಿ, ಜಿಲ್ಲಾಡಳಿತ ಆ ಕ್ಷೇತ್ರದಲ್ಲಿ ಏನು ಕೆಲಸವನ್ನು ಮಾಡಿದೆ, ಇನ್ನು ಮಾಡಬೇಕಾಗಿರುವ ಕೆಲಸಗಳೇನು? ವಿದ್ಯುತ್ ಕಂಬಗಳನ್ನು ಕೂಡಲೇ ಸರಿ ಮಾಡಿ ಲೈನ್‌ಗಳನ್ನು ಎಳೆದು ಅಲ್ಲಿ ವಿದ್ಯುತ್ ಸರಬರಾಜಿಗೆ ಕೈಗೊಳ್ಳಬೇಕಾಗಿರುವ ಕ್ರಮಗಳೇನು, ಇವೆಲ್ಲವನ್ನೂ ಒಂದು ಕಾಲಮಿತಿಯಲ್ಲಿ ಮಾಡಿ ಈಗ ಜಿಲ್ಲಾಡಳಿತ ಏನು ಕ್ರಮವನ್ನು ಕೈಗೊಳ್ಳುತ್ತಿದ್ದಾರೆ, ಇನ್ನು ಎಷ್ಟು ದಿವಸಗಳೊಳಗೆ ಅದನ್ನು ಮುಗಿಸುತ್ತಾರೆನ್ನುವ ವರದಿಯನ್ನು ತರಿಸಿ ಬಹುಶಃ ಮುಂದಿನ ಶುಕ್ರವಾರ ಅಥವಾ ಮುಂದಿನ ಸೋಮವಾರದಂದು ಸಮಗ್ರವಾಗಿರುವ ಒಂದು ವರದಿಯನ್ನು ಸದನಕ್ಕೆ ಸಲ್ಲಿಸುತ್ತೇನೆ.

ಸಣ್ಣ ರೈತರ ಪಂಪ್ ಸೆಟ್‌ಗಳಿಗೆ ಕಡಿಮೆ ದರದಲ್ಲಿ ಸೀಮೆಎಣ್ಣೆ

+ಶ್ರೀ ಡಿ.ವಿ. ಸದಾನಂದ ಗೌಡ (ಪುತ್ತೂರು) : ಮಾನ್ಯ ಅಧ್ಯಕ್ಷರೆ, ರಾಜ್ಯದ ಎಲ್ಲಾ ಭಾಗಗಳಲ್ಲಿ ಈಗಾಗಲೇ ಕೃಷಿಗೆ ನೀರಿನ ಕೊರತೆ ಅದೇ ರೀತಿ ವಿದ್ಯುತ್ ಕೊರತೆ ಇದ್ದು, ಎಲ್ಲಾ ಸಣ್ಣ ರೈತಾಪಿವರ್ಗದವರು ಸಾಧಾರಣ ಕೇರೊಸಿನ್ ಚಾಲಿತ ಸಣ್ಣ ಪಂಪ್‌ಸೆಟ್ಟಿನಿಂದ ಅಂದರೆ ವಿಲಿಯೆಸ್ ಪಂಪುಸೆಟ್ಟುಗಳಿಂದ ತಮ್ಮ ತೋಟಗಳಿಗೆ ನೀರನ್ನು ಹಾಯಿಸುವಂಥ ಪದ್ಧತಿಯನ್ನು ನಾವು ನೋಡುತ್ತಿದ್ದೇವೆ. ಹಿಂದೆ ಒಂದು ವ್ಯವಸ್ಥೆ ಇತ್ತು, ಈ ಸಣ್ಣ ರೈತರಿಗೆ, ಕೇರೋಸಿನ್ ಚಾಲಿತ ಪಂಪ್‌ಸೆಟ್ಟಿನವರಿಗೆ ಸಬ್ಸಿಡಿ ದರದಲ್ಲಿ ಸುಮಾರು ನಲವತ್ತು ಲೀಟರ್ ಎಣ್ಣೆಯನ್ನು ತಿಂಗಳಿಗೆ ಕೊಡುವ ವ್ಯವಸ್ಥೆ ಇತ್ತು. ಆದರೆ ಕಳೆದ ಒಂದು, ಒಂದೂವರೆ ವರ್ಷದಿಂದ ಈ ಸರ್ಕಾರ ಈ ಪದ್ಧತಿಯನ್ನು ರದ್ದುಪಡಿಸಿದ ಕಾರಣ ಮುಕ್ತ ಮಾರುಕಟ್ಟೆಯಲ್ಲಿ ಹನ್ನೆರಡು ರೂಪಾಯಿಗಳಿಗೂ ಮೇಲ್ಪಟ್ಟು ದರವನ್ನು ಕೊಟ್ಟು ಅವರು ಕೇರೊಸಿನ್ ಎಣ್ಣೆಯನ್ನು ಪಡೆಯಬೇಕಾದ ಒಂದು ಕಷ್ಟಕರವಾದ ಒಂದು ಪರಿಸ್ಥಿತಿ ಬಂದಿದೆ, ಅದರ ಜೊತೆಗೆ ಸಾಕಷ್ಟು ಸೀಮೆ ಎಣ್ಣೆಯು ಕೂಡ ಸಿಗುತ್ತಿಲ್ಲ. ಇಂಥ ಸಂದರ್ಭದಲ್ಲಿ ಹಿಂದೆ ಯಾವ ರೀತಿ ವ್ಯವಸ್ಥಿತ ರೀತಿಯಲ್ಲಿ ಸಣ್ಣ ರೈತರಿಗೆ ಕೆರೋಸಿನ್ ಚಾಲಿತ ಪಂಪುಸೆಟ್ಟುಗಳಿಗೆ ಕೆರೋಸಿನ್ ಅನ್ನು ಕಡಿಮೆದರದಲ್ಲಿ ಶೇಕಡ 50ರಷ್ಟು ಸಬ್ಸಿಡಿ ದರದಲ್ಲಿ ಕೊಡುತ್ತಿದ್ದರು ಅದನ್ನು ಪುನಃ ಪ್ರಾರಂಭಿಸಬೇಕು. ಒಂದು ಕಡೆ ವಿದ್ಯುತ್ ಕೊರತೆ ಇದೆ. ಎರಡನೆಯದಾಗಿ, ಈ ಸಣ್ಣ ಪಂಪುಸೆಟ್ಟನ್ನು ಏತಕ್ಕೆ ಉಪಯೋಗಿಸುತ್ತಾರೆಂದರೆ,

ಒಂದೇ ಕಡೆ ನೀರಿಲ್ಲ, ಹಲವಾರು ಹೊಂಡಗಳಲ್ಲಿ ಬೇರೆ ಬೇರೆ ಕಡೆ ನೀರಿದೆ. ಸಣ್ಣ ಪಂಪುಗಳನ್ನು ಏಕೆ ಉಪಯೋಗಿಸುತ್ತಾರೆ ಎಂದರೆ ನೀರು ಒಂದೇ ಕಡೆ ಇರುವುದಿಲ್ಲ, ಬೇರೆ ಬೇರೆ ಕಡೆ ಹಲವಾರು ಹೊಂಡಗಳಲ್ಲಿ ನೀರು ಇರುತ್ತದೆ. ಈ ಸಣ್ಣ ಪಂಪ್‌ಸೆಟ್ಟನ್ನು ಬೇರೆ ಬೇರೆ ಸ್ಥಳಗಳಲ್ಲಿಟ್ಟು ಅಲ್ಲಿಂದ ನೀರನ್ನು ಎತ್ತಲು ಸಣ್ಣ ರೈತರಿಗೆ ಸಾಧ್ಯವಾಗುವ ಹಿನ್ನೆಲೆಯಲ್ಲಿ ಸರ್ಕಾರ ತಕ್ಷಣವೇ, ಅಂದರೆ ಇನ್ನು ಡಿಲೇ ಮಾಡಬಾರದು, ಇವತ್ತು ನಮಗೆ ಭರವಸೆ ಕೊಟ್ಟಮೇಲೆ ಆರು ತಿಂಗಳು ಅಥವಾ ಒಂದು ವರ್ಷದ ನಂತರ ಕೊಟ್ಟರೆ ಏನೂ ಪ್ರಯೋಜನವಾಗುವುದಿಲ್ಲ. ಇನ್ನು ಒಂದು ವಾರದೊಳಗೆ ಸಣ್ಣ ರೈತರಿಗೆ ಕನಿಷ್ಠ 50 ಲೀಟರ್‌ನಷ್ಟು ಸೀಮೇಎಣ್ಣೆಯನ್ನು ಸಬ್ಸಿಡೈಸ್ಡ್ ದರದಲ್ಲಿ, ಹಿಂದೆ ಸರ್ಕಾರ ಕೊಡುತ್ತಿದ್ದಂಥ ಪದ್ಧತಿಯಲ್ಲಿ ಕೊಡಬೇಕು ಮತ್ತು ಅದನ್ನು ಕಾರ್ಡುಗಳ ಮೂಲಕ ವಿತರಣೆ ಮಾಡಬೇಕು ಎನ್ನುವಂಥ ಆಗ್ರಹವನ್ನು ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಮಾಡಲು ಇಚ್ಛಿಪಡುತ್ತೇನೆ.

ಶ್ರೀ ಜಿ. ಬಸವೆಣ್ಣಪ್ಪ (ಆಹಾರ ಮತ್ತು ನಾಗರೀಕ ಪೂರೈಕೆ ಸಚಿವರು) : ಸನ್ಮಾನ್ಯ ಉಪಾಧ್ಯಕ್ಷರೇ, ಸೀಮೆಎಣ್ಣೆಯನ್ನು ಅಗ್ರಿಕಲ್ಚರಲ್ ಪರ್ಪಸ್‌ಗೆ ಕೊಡುವುದಕ್ಕೆ 1966ರ ಆಜ್ಞೆ ಪ್ರಕಾರ ಅನುಮತಿ ಇತ್ತು. That order was repealed in 1993. ಈಗ ಪಡಿತರ ಕಾರ್ಡುದಾರರಿಗೆ ಸೀಮೆಎಣ್ಣೆಯನ್ನು ಕೊಡುವುದೇ ಕಷ್ಟವಾಗಿದೆ. ಸುಮಾರು 75 ಸಾವಿರ ಕಿಲೋ ಲೀಟರ್ ಸೀಮೆಎಣ್ಣೆ ಬೇಕು. ಆದರೆ ಕೇಂದ್ರ ಸರ್ಕಾರ ಕೊಡುತ್ತಿರುವುದು ಕೇವಲ 54 ಸಾವಿರ ಕಿಲೋ ಲೀಟರ್ ಮಾತ್ರ. ಅಗ್ರಿಕಲ್ಚರಲ್ ಪರ್ಪಸ್‌ಗೆ ಕೊಡುವಂಥ ಆರ್ಡರ್ ರಿಪೀಲ್ ಆದುದರಿಂದ ಮಾನ್ಯ ಸದಸ್ಯರು ಕೇಳಿರುವಂತೆ ಕೊಡುವುದಕ್ಕೆ ಆಗುವುದಿಲ್ಲ ಎಂದು ತಮ್ಮ ಮುಖಾಂತರ ಮಾನ್ಯ ಸದಸ್ಯರ ಗಮನಕ್ಕೆ ತರಲು ಬಯಸುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಂದಿನಿ ಹಾಲು ಸರಬರಾಜಿನಲ್ಲಿ ಡಿ.ಡಿ.ಟಿ. ಮತ್ತ ಕ್ಲೋರಿನ್ ವಾಸನೆ ಬರುತ್ತಿರುವ ಬಗ್ಗೆ.

+ ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಉಪಾಧ್ಯಕ್ಷರೇ, ಕಳೆದ 10 ದಿನಗಳಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಅದರಲ್ಲೂ ವಿಶೇಷವಾಗಿ ಮಂಗಳೂರು ನಗರ, ಉಳ್ಳಾಲ, ಸುರತ್ಕಲ್ ಇತ್ಯಾದಿ ಪಟ್ಟಣಗಳಲ್ಲಿ ನಂದಿನಿ ಹಾಲು ಸರಬರಾಜಿನಲ್ಲಿ ಡಿ ಡಿ ಟಿ ವಾಸನೆ ಬರುತ್ತಿದ್ದು, ಈ ವಿಚಾರದಲ್ಲಿ ಸಾರ್ವಜನಿಕರು ಇದರ ಬಗ್ಗೆ ಬಹಳಷ್ಟು ನನ್ನ ಗಮನವನ್ನು ಸೆಳೆದಿದ್ದಾರೆ. ಕೆಲವು ಸಲ ಡಿ ಡಿ ಟಿ ವಾಸನೆ, ಕೆಲವು ಸಲ ಕ್ಲೋರಿನ್ ವಾಸನೆ ಹೀಗೆ ಬರುತ್ತಿದ್ದು, ಒಟ್ಟಿನಲ್ಲಿ ಹಾಲಿನಲ್ಲಿ ಯಾವ ತರಹದ ವಾಸನೆ ಇರಬೇಕೋ ಅದು ಆ ರೀತಿಯಲ್ಲಿ ಇಲ್ಲ. ಇದರಿಂದಾಗಿ ಕಾಫಿ, ಮೊಸರು, ಮಜ್ಜಿಗೆ ಯಾವುದನ್ನೂ ಮಾಡಲು ಆಗುತ್ತಿಲ್ಲ. ಇದರ ಬಗ್ಗೆ ಕ್ವಾಲಿಟಿ ಕಂಟ್ರೋಲ್‌ನವರ ಹತ್ತಿರ ನಾವು ವಿಚಾರಿಸಿದಾಗ ಅವರ ಉತ್ತರವೆಂದರೆ, ಹಾಲಿನ ಉತ್ಪಾದನೆ ಮತ್ತು ಶೇಖರಣೆ ಕಡಿಮೆಯಾಗಿದೆ. ಆದುದರಿಂದ ಬೇರೆ ಕಡೆಗಳಿಂದ ಅಂದರೆ ಹಾಸನದಿಂದ ಅಲ್ಲಿಗೆ ಹಾಲು ಸರಬರಾಜು ಆಗುತ್ತಿದೆ. ಮಂಗಳೂರಿನಲ್ಲಿ ಕೆಲವು ಕಡೆ ಅದನ್ನು ಮಿಕ್ಸ್ಡ್ ಮಾಡಿ ನಂತರ ಪ್ಯಾಕೆಟ್ ಮಾಡಿ ನಂದಿನಿ ಹಾಲನ್ನು ಸರಬರಾಜು ಮಾಡುತ್ತಿದ್ದಾರೆ. ಅದೂ ಅಲ್ಲದೆ ಅಲ್ಲಿ ಇರುವಂಥ ಯಂತ್ರದಲ್ಲೂ ಕೂಡ ತೊಂದರೆ